6. ವಿಷಯ : ಸೋವಾರಪೇಟೆ ತಾಲ್ಲೂಕು ಚಿಕ್ಲಿಹೊಳೆ ನಾಲೆ ಹಾಗೂ ತೂಬುಗಳನ್ನು ದುರಸ್ತಿಪಡಿಸಿ ರೈತರಿಗೆ ಅನುಕೂಲ ಮಾಡುವ ಬಗ್ಗೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಮಡಿಕೇರಿ): ಮಾನ್ಯ ಅಧ್ಯಕ್ಷರೆ, ನಮ್ಮ ಕೊಡಗು ಜಿಲ್ಲೆಯಲ್ಲಿ ಈಗಾಗಲೇ ಚಿಕ್ಲಿಹೊಳೆ ಎನ್ನತಕ್ಕಂಥ ಡ್ಯಾಂ ಇದೆ. ಅದೋಂದೇ ಡ್ಯಾಂ ನಮ್ಮ ಕೊಡಗಿನ ಜನತೆಗೆ, ರೈತರಿಗೆ ನೀರನ್ನು ಉಣಿಸುವಂಥ ಕೆಲಸವನ್ನು ಮಾಡುತ್ತಿರುವುದು.

ಅಧ್ಯಕ್ಷರು: ಅಲ್ಲಿ ತೂಬುಗಳನ್ನು ದುರಸ್ತಿಪಡಿಸಬೇಕೆಂದು ಹೇಳಿದ್ದೀರಿ.

ಶ್ರೀ ಎಂ ಪಿ ಅಪ್ಪಚ್ಚು ರಂಜನ್: ಅದನ್ನು ದುರಸ್ತಿಪಡಿಸುವುದಕ್ಕೆ ಎಸ್ಟಿಮೇಟ್ ಮಾಡಿ ಬಂದಿದ್ದರೂ ಕೂಡ ಆ ಕೊಡಗಿನ ಚಿಕ್ಲಿಹೊಳೆ ಡ್ಯಾಂ ಬಗ್ಗೆ ಏನೂ ಗಮನಹರಿಸುತ್ತಿಲ್ಲ. ಆ ಬಗ್ಗೆ ಏನು ಕ್ರಮ ಕೈಗೊಂಡಿದ್ದಾರೆಂದು ಹೇಳಬೇಕು.

ಶ್ರೀ ಎಂ.ಬಿ.ಪಾಟೀಲ್ (ಜಲಸಂಪನ್ಮೂಲ): ಮಾನ್ಯ ಅಧ್ಯಕ್ಷರೆ, ಉತ್ತರದ ಪ್ರತಿ ತರಲು ಕಳುಹಿಸಿದ್ದೇವೆ. ಆದುರಿಂದ ಉತ್ತರವನ್ನು ಆಮೇಲೆ ಕೊಡುತ್ತೇನೆ.

ಅಧ್ಯಕ್ಷರು: ಆಯಿತು. ಈಗ ಸಿ.ಟಿ ರವಿಯವರೆ, ತಮ್ಮ ವಿಷಯ ಪ್ರಸ್ತಾಪ ಮಾಡಿ.

7. ವಿಷಯ: ರಾಜ್ಯದಲ್ಲಿ ಡೆಂಗ್ಯು, ಹೆಚ್1ಎನ್1, ಮಲೇರಿಯಾ ವ್ಯಾಪಕವಾಗಿ ಹರಡುತ್ತಿರುವ ಬಗ್ಗೆ.

ಶ್ರೀ ಸಿ.ಟಿ ರವಿ (ಚಿಕ್ಕಮಗಳೂರು): ಮಾನ್ಯ ಅಧ್ಯಕ್ಷರೆ, ಮಾನ್ಯ ಆರೋಗ್ಯ ಸಚಿವರಿಗೆ, ಈ ಬರದಲ್ಲಿ ತತ್ತರಿಸುತ್ತಿರಕ್ಕಂಥ ರಾಜ್ಯಕ್ಕೆ ಆತಂಕವನ್ನು ಉಂಟುಮಾಡುವ ಹಾಗೆ ಡೆಂಗ್ಯು ಹೆಚ್1ಎನ್1, ಚಿಕನ್ ಗುನ್ಯ, ಮಲೇರಿಯಾ ಪ್ರಕರಣಗಳು ವ್ಯಾಪಕವಾಗಿ ಹರಡುತ್ತಿರುವುದರಿಂದ ಜನರು ತತ್ತರಗೊಂಡಿದ್ದಾರೆ. ಹವಾಮಾನದ ವೈಪರೀತ್ಯದಿಂದ ಇಡೀ ರಾಜ್ಯ ಜ್ವರಭಾಧೆಯಿಂದ ನರಳುತ್ತಿದೆ. ಬೇಸಿಗೆಯ ಕೊನೆ ಹಾಗೂ ಮಳೆಗಾಲದ ಆರಂಭದಲ್ಲಿ

ಕಾಣಿಸಿಕೊಳ್ಳುವ ನಾನಾ ರೀತಿಯ ಅಂಟು ಜಾಡ್ಯಗಳು ಉಲ್ಬಣಗೊಂಡು ಜನರ ಜೀವಕ್ಕೆ ಅಪಾಯ ತರುವ ಪ್ರಕರಣಗಳು ಕಂಡುಬರುತ್ತಿವೆ. ಈ ಕೂಡಲೇ ಸರ್ಕಾರ ಸಮರೋಪಾದಿಯಲ್ಲಿ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಅಲ್ಲದೇ ರೋಗ ಪೀಡಿತರಿಗೆ ವಿಶೇಷ ಆರೈಕೆ, ಔಷಧಿಗಳ ವಿತರಣೆ, ಚಿಕಿತ್ಸೆಗೆ ಸ್ಪಂದಿಸಿ ರೋಗಿಗಳ ಆತಂಕವನ್ನು ನಿವಾರಿಸಬೇಕಾಗಿರುತ್ತದೆ. ಇಂಥ ಆತಂಕದ ಗಂಭೀರವಾದ ಸಾರ್ವಜನಿಕ ಮಹತ್ವವಾಗಿರಕ್ಕಂಥ ಈ ಒಂದು ವಿಷಯದಲ್ಲಿ ಸರ್ಕಾರ ಏನು ಕ್ರಮ ಕೈಗೊಂಡಿದೆಯೆನ್ನುವುದನ್ನು ತಮ್ಮ ಮೂಲಕ ಕೇಳಿ ವುದಕ್ಕೆ ಬಯಸುತ್ತೇನೆ.

ಶ್ರೀ ಟಿ.ಬಿ ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಶ್ರೀ ಯು.ಟಿ.ಖಾದರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು, ಇವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಮಾನ್ಯ ಆರೋಗ್ಯ ಸಚಿವರು ಈ ಇಲ್ಲಿ ಇಲ್ಲ. ಅವರು ವಿಧಾನ ಪರಿಷತ್ತಿನಲ್ಲಿದ್ದಾರೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ detailed ಉತ್ತರವನ್ನು ಕಳುಹಿಸಿಡುತ್ತೇವೆ. ಆದರೆ ಮಾನ್ಯ ಸದಸ್ಯರೆ, ತಾವು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿತಕ್ಕಂಥ ವಿಚಾರಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಅದು ಸರ್ಕಾರದ ಗಮನದಲ್ಲಿದೆ. ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಳ್ಳವೇಕೋ ಅದನ್ನು ತೆಗೆದುಕೊಂಡು ಅದನ್ನು ನಿಯಂತ್ರಣದಲ್ಲಿಡುವುದಕ್ಕೆ ಅಗತ್ಯವಾದ ಎಲ್ಲ ಕ್ರಮಗಳನ್ನು ತೆಗೆದುಕೊಂಡಿದೆ. ಇದಕ್ಕೆ ಸಮಗ್ರವಾದ ಉತ್ತರವನ್ನು ನಾನು ಕೊಡಿಸಿಕೊಡುತ್ತೇನೆ.

8. ವಿಷಯ : ಮಾಯಕೊಂಡ ಕ್ಷೇತ್ರಕ್ಕೆ ಬೋರ್‌ವೆಲ್, ನೀರಾವರಿ, ರಸ್ತೆ, ಸಮುದಾಯ ಭವನಕ್ಕೆ ವಿಶೇಷ ಹಣ ಸಹಾಯ ಮಾಡುವ ಬಗ್ಗೆ.

ಅಧ್ಯಕ್ಷರು: ಮಾನ್ಯ ಕೆ. ಶಿವಮೂರ್ತಿಯವರೆ, ತಾವು ಪ್ರಶ್ನೆಯನ್ನು ಕೇಳಿದ್ದೀರಿ. ಅದರಲ್ಲಿ ಮೊದಲನೆಯದಾಗಿ ಬೋರ್‌ವೆಲ್, ಎರಡನೆಯದಾಗಿ ನೀರಾವರಿ ವಿಚಾರ, ಮೂರನೆಯದಾಗಿ ರಸ್ತೆ ವಿಚಾರ, ನಾಲ್ಕನೆಯದಾಗಿ ಸಮುದಾಯ ಭವನದ ವಿಚಾರವಿದೆ. ಇವೆಲ್ಲವುಗಳಿಗೆ ಯಾರು ಉತ್ತರ ಕೊಡಬೇಕು?